ಉಪನ್ಯಾಸಕರ ಹುದ್ದೆಗಳನ್ನು ಶೈಕ್ಷಣಿಕ ವರ್ಷದವರೆಗೆ ನೇಮಿಸಿಕೊಳ್ಳಲು ಆಯಾ ಕಿರಿಯ ಕಾಲೇಜಿನ ಉಪನ್ಯಾಸಕರಿಗೆ ಅಧಿಕಾರ ಕೊಡಲಾಗಿದೆ.

ಗೋಕಾಕ್ ಹತ್ತಿ ಗಿರಣಿಯ ಕ್ಷೇತ್ರವನ್ನು ಅಧಿಸೂಚಿತ ಕ್ಷೇತ್ರವನ್ನಾಗಿ ಮಾಡುವ ಬಗ್ಗೆ.

೧೬೨೬. ಶ್ರೀ ಎಂ. ಎಲ್. ಮುತ್ತಣ್ಣವರ (ಗೋಕಾಕ್) —ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಯಿತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೆ?

ಅ) ಗೋಕಾಕ್ (ಹತ್ತಿ) ಪಾಲ್ಸ್ ಗಿರಣಿಯ ಕ್ಷೇತ್ರವನ್ನು ಅಧಿಸೂಚಿತ ಕ್ಷೇತ್ರವನ್ನಾಗಿ ಮಾಡಲಾಗಿರುವುದು ನಿಜವೇ?

ಆ) ಸದರಿ ಕ್ಷೇತ್ರದಲ್ಲಿ ೧೦,೦೦೦ ಜನಸಂಖ್ಯೆ ಇದ್ದು ಈ ಸ್ಥಳವನ್ನು ಮಂಡಲ ಪಂಚಾಯತ್ ಕೇಂದ್ರವಾಗಿ ರಚಿಸಲು ಸರ್ಕಾರದವರು ಉದ್ದೇಶಿಸಿರುವರೆ?

ಇ) ಹಾಗಿಲ್ಲದಿದ್ದಲ್ಲಿ ಸರ್ಕಾರದವರು ಅಳವಡಿಸಿಕೊಂಡ ನಿಯಮಗಳೇನು? ಹಾಗೂ ಈ ಕ್ಷೇತ್ರವನ್ನು ಜನಸಂಖ್ಯೆಯ ಆಧಾರದ ಮೇರೆಗೆ ಮಂಡಲ ಪಂಚಾಯತ್ ಕೇಂದ್ರವಾಗಿ ಪರಿವರ್ತಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್‌ರಾಜ್ ಸಚಿವರು).—

ಅ) ಹೌದು.

ಆ) ಈಗ ಹಾಲಿ ೧೦,೦೦೦ ಅಥವಾ ಅದಕ್ಕಿಂತ ಕಡಿಮೆ ಇರುವ ಪುರಸಭೆಗಳನ್ನು ಮಾತ್ರ ಮಂಡಲ ಪಂಚಾಯತ್ ಆಗಿ ಪರಿವರ್ತಿಸಿರುತ್ತೆ. ಆದರೆ ಅಧಿಸೂಚಿತ ಕ್ಷೇತ್ರವನ್ನು ಮಂಡಲಗಳಾಗಿ ಪರಿವರ್ತಿಸುವುದಿಲ್ಲ.

ಇ) (ಅ)ನಲ್ಲಿ ಉತ್ತರಿಸಿದೆ.

ಆಳಂದ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳ ನಿರ್ಮಾಣದ ಬಗ್ಗೆ

೧೫೫೫. ಶ್ರೀ ಶರಣಬಸಪ್ಪಪಾಲಿ ಪಾಟೀಲ್ (ಆಳಂದ್) —ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಎಷ್ಟು ಕೊಳವೆ ಬಾವಿಗಳನ್ನು ನಿರ್ಮಿಸಲಾಗಿದೆ ?

ಆ) ಆ ಪೈಕಿ ಎಷ್ಟು ಬಾವಿಗಳು ಉಪಯೋಗವಾಗುತ್ತಿವೆ ಹಾಗೂ ನೀರಿಲ್ಲದಿದ್ದು ಉಪಯೋಗಕ್ಕೆ ಬಾರದಿರುವ ಬಾವಿಗಳೆಷ್ಟು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿ ಪಂಚಾಯತ್ ರಾಜ್ ಇಲಾಖೆಯ ಸಚಿವರು).—

ಅ) ಒಟ್ಟು ೬೦೬ (ಜನವರಿ ೧೯೮೬ರ ಕೊನೆಯವರೆಗೆ)

ಆ) ಉಪಯೋಗವಾಗುತ್ತಿರುವ ಬಾವಿಗಳು — ೪೬೦
ವಿಫಲವಾದ ಬಾವಿಗಳು — ೧೪೬

ಒಟ್ಟು ೬೦೬